**1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಬೆಳಗಾವಿ ಇವರ**

**ನ್ಯಾಯಾಲಯದಲ್ಲಿ ಬೆಳಗಾವಿ**

**SC. No: 96/2025**

**CW. No: 8**
**PW. No: 2**

ಸಾಕ್ಷಿದಾರರ ಹೆಸರು : ವೀರಭದ್ರಗೌಡ ಪಾಟೀಲ

ತಂದೆಯ ಹೆಸರು : ಈರನಗೌಡ ಪಾಟೀಲ

ವಯಸ್ಸು : 49 ವರ್ಷ

ಉದ್ಯೋಗ : ಒಕ್ಕಲುತನ

ವಾಸ್ತವ್ಯ : ಬಲೋಗಾ ತಾಃ ಖಾನಾಪುರ

ಇಂದು ದಿನಾಂಕಃ 25.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ -**

ನಾನು ಸಹಿ ಮಾಡಬಲ್ಲೆ. ನನ್ನ ಸಹಿ ಹಾಗೂ ನನ್ನ ಸಹಿ ಇರುವ ದಾಖಲೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮೊಬೈಲ ಹ್ಯಾಂಡಸೆಟ್‌ಗಳ ವಿಶ್ಲೇಷಣಾ ಪಂಚನಾಮೆ ಹಾಗೂ ಶವದ ಮೈಮೇಲಿನ ಬಟ್ಟೆ ಜಪ್ತಿ ಪಂಚನಾಮೆ ಮತ್ತು ಅವುಗಳ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮೊಬೈಲ ಹ್ಯಾಂಡಸೆಟ್‌ಗಳ ವಿಶ್ಲೇಷಣಾ ಪಂಚನಾಮೆಯನ್ನು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು, ಶವದ ಮೈಮೇಲಿನ ಬಟ್ಟೆ ಜಪ್ತಿ ಪಂಚನಾಮೆಯನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ನಿಪಿ-25 ಪಂಚನಾಮೆ ಕಾಲಕ್ಕೆ ನಾನು ಈಗ ನೋಡುತ್ತಿರುವ ಎರಡು ಪೋಟೋಗಳನ್ನು ತೆಗೆಸಿರುತ್ತಾರೆ. ಸದರಿ 2 ಪೋಟೋಗಳನ್ನು ನಿಪಿ-27 ಮತ್ತು 28 ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಇನ್ನೊಂದು ಪೋಟೋವನ್ನು ನಿಪಿ-26 ಪಂಚನಾಮೆ ಕಾಲಕ್ಕೆ ತೆಗೆಸಿರುತ್ತಾರೆ. ಸದರಿ ಪೋಟೋವನ್ನು ನಿಪಿ-29 ಎಂದು ಗುರುತಿಸಲಾಯಿತು. ನಿಪಿ-25 ಪಂಚನಾಮೆ ಕಾಲಕ್ಕೆ ನನ್ನ ಸಮಕ್ಷಮ ವಿಶ್ಲೇಷಣೆ ಮಾಡಿದ ಮೊಬೈಲ ಹ್ಯಾಂಡಸೆಟ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. (ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಮೊಬೈಲ್ ಹ್ಯಾಂಡಸೆಟ್‌ಗಳನ್ನು ತೋರಿಸಲು ಅನುಮತಿ ಕೋರಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸುವುದಾಗಿ ಹೇಳಿದ್ದರಿಂದ , ಬಿಳಿ ಬಟ್ಟೆಯಲ್ಲಿ ಸುತ್ತಿ, ಸೀಲು ಮಾಡಿದ ಮೊಬೈಲ್ ಹ್ಯಾಂಡಸೆಟ್‌ಗಳನ್ನು ತೆರೆದ ನ್ಯಾಯಾಲಯದಲ್ಲಿ ಕತ್ತರಿಸಿ

ತೆರೆದು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ಗುರುತಿಸಿದ ಮೇರೆಗೆ ಈ ಕೆಳಗಿನಂತೆ ಗುರುತಿಸಲಾಯಿತು.)

1. ನೀಲಿ ಬಣ್ಣದ ಓಪೋ ಕಂಪನಿಯ ಮೊಬೈಲ – ಮುಮಾ.14
2. ನೀಲಿ ಬಣ್ಣದ ವಿವೋ ಕಂಪನಿಯ ಮೊಬೈಲ – ಮುಮಾ.15

2. ಮುಮಾ.14 ಮತ್ತು 15 ಇವುಗಳನ್ನು ಪರಿಶೀಲಿಸಿ ಸದರಿ ಮೊಬೈಲಗಳಲ್ಲಿರುವ ಪೋಟೋಗಳನ್ನು, ಪೋಟೋಗಳಿರುವ ವರದಿಯನ್ನು ಠಾಣೆಯಲ್ಲಿ ಪ್ರಿಂಟ ಹಾಕಿಸಿರುತ್ತಾರೆ. ಸೀಲ್ ಮಾಡಿರುವ ವರದಿಯನ್ನು ತೆರೆದ ನ್ಯಾಯಾಲಯದಲ್ಲಿ ಕತ್ತರಿಸಿ ತೆರೆದು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅದನ್ನು ಗುರುತಿಸಿದ ಮೇರೆಗೆ, ಸದರಿ ಎರಡು ವಿಶ್ಲೇಷಣಾ ವರದಿಗಳನ್ನು ನಿಪಿ-30 ಮತ್ತು ನಿಪಿ-31 ಎಂದು ಗುರುತಿಸಲಾಯಿತು. ನಿಪಿ-25 ಮತ್ತು 26 ವರದಿಗಳನ್ನು ದಿನಾಂಕ 10.04.2025ರಂದು ತಯಾರಿಸಿರುತ್ತಾರೆ. ನಿಪಿ-25 ಎರಡು ಮೊಬೈಲಗಳ ಪರಿಶೀಲನೆಯನ್ನು ಬೆಳಗಾವಿಯ ಸಿಇಎನ್ ಕಛೇರಿಯಲ್ಲಿ ಮಾಡಿರುತ್ತಾರೆ. ವಿಶ್ಲೇಷಣೆಗೊಳಪಡಿಸಿದ ಮುಮಾ.14 ಮತ್ತು 15 ಮೊಬೈಲಗಳಲ್ಲಿ ಅಶ್ಲೀಲ ವಿಡಿಯೋ ಮತ್ತು ತೀರ ಖಾಸಗಿ ಕ್ಷಣಗಳನ್ನೊಳಗೊಂಡ ಪೋಟೋಗಳು ಇದ್ದವು. ಸದರಿ ವಿಡಿಯೋ ಮತ್ತು ಪೋಟೋಗಳು ನಿಪಿ-30 ಮತ್ತು 31 ವರದಿಗಳಲ್ಲಿ ಕಾಣಿಸುವ ಪೋಟೋಗಳು ಇರುತ್ತವೆ.

3. ನಂತರ ಪೋಲಿಸರು ನನ್ನನ್ನು ಅದೇ ದಿನ ಖಾನಾಪುರ ಪೋಲಿಸ ಠಾಣೆಗೆ ಕರೆಯಿಸಿದ್ದರು. ಪೋಲಿಸ ಠಾಣೆಯಲ್ಲಿ ಪೋಲಿಸರು ನನ್ನ ಸಮಕ್ಷಮ ಮೃತದೇಹದ ಮೇಲಿನ ಬಟ್ಟೆಗಳು ಮತ್ತು ದೇಹದ ಭಾಗಗಳನ್ನು ಬಾಟಲಿಗಳಲ್ಲಿ ಹಾಕಿದ್ದ ಭಾಗಗಳನ್ನು ನಿಪಿ-26ರಂತೆ ಪಂಚನಾಮೆ ತಯಾರಿಸಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಂಜೆ 07.00-07.30ರವರೆಗೆ ಜಪ್ತಿ ಪಡಿಸಿಕೊಂಡಿರುತ್ತಾರೆ. ಪಂಚನಾಮೆ ಕಾಲಕ್ಕೆ ನಿಪಿ-29ರಂತೆ ಪೋಟೋ ತೆಗೆಸಿರುತ್ತಾರೆ. ನಿಪಿ-29 ಪೋಟೋದಲ್ಲಿ ಕಾಣಿಸುವ ವಸ್ತು ಮತ್ತು ಸೀಲು ಮಾಡಿದ ಪ್ಯಾಕಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ.

ನಿಪಿ-25 ಮತ್ತು 26 ಪಂಚನಾಮೆಗಳನ್ನು ತಯಾರಿಸುವ ಕಾಲಕ್ಕೆ ನನ್ನ ಜೊತೆ ಚಾಸಾ.9ರವರು ಹಾಜರಿದ್ದರು.

ಪಾಟೀ **ಸವಾಲುಃ ಆರೋಪಿತರ ಪರ ಶ್ರೀ ಕೆ ವಿ ಎಮ್ ವಕೀಲರಿಂದಃ**

4. ಪಂಚನಾಮೆ ಸಮಯದಲ್ಲಿ ಹಾಜರಿರುವಂತೆ ಪೋಲಿಸರು ನನಗೆ ಯಾವುದೇ ನೋಟಿಸ ನೀಡಿರಲಿಲ್ಲ. ಮೃತನು ಮತ್ತು ಆತನ ಅಣ್ಣತಮ್ಮಂದಿರು ನಮ್ಮ ಊರಿನವರು ಎಂದರೆ ಸರಿ. ನನಗೆ ಮೃತನ ಅಣ್ಣತಮ್ಮಂದಿರ ಪರಿಚಯವಿರುತ್ತದೆ ಎಂದರೆ ಸರಿ. ಮೃತನ ಮನೆತನದವರು ನನಗೆ ದೂರದ ಸಂಬಂಧಿಕರು. ಮೃತನು ಮತ್ತು ಆತನ ಅಣ್ಣತಮ್ಮಂದಿರು ಬೇರೆಯಾಗುವಾಗ ಮೃತನ ಪಾಲಿಗೆ ಮನೆ ಬಂದಿರಲಿಲ್ಲ, ಅವನ ಅಣ್ಣನ ಪಾಲಿಗೆ ಮನೆ ಬಂದಿತ್ತು ಎಂದರೆ ಸರಿ. ಘಟನೆ ಪೂರ್ವದ ಎರಡು ವರ್ಷಗಳ ಹಿಂದೆ ಮೃತ ಶಿವನಗೌಡನು ಹೊಸ ಮನೆ ಕಟ್ಟಿಸಿದ್ದನು ಎಂದರೆ ಸರಿ. ಹೊಲಗಳ ಸಲುವಾಗಿ ಅಣ್ಣತಮ್ಮಂದಿರು ಜಗಳವಾಡುತ್ತಿದ್ದರು, ಆದರೆ ಜಗಳದ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲ. ಜಗಳದ ವಿಷಯವಾಗಿ ಚಾಸಾ.15ರವರ ಹೆಂಡತಿ ಮೃತ ಶಿವನಗೌಡನ ಮೇಲೆ ಸಿಟ್ಟಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ಮೃತ ಶಿವನಗೌಡನು ಹೊಸಮನೆ ಕಟ್ಟಿಸಿದ ನಂತರ ಚಾಸಾ.15ರವರ ಹೆಂಡತಿ ಅವರನ್ನು ಅವರ ಮನೆಯ ಒಳಗೆ ಹೋಗಲು ಬಿಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ಮೃತ ಶಿವನಗೌಡನು ಬೈಕ ಮೇಲೆ ಓಡಾಡುತ್ತಿದ್ದನು ಎಂದರೆ ಸರಿ. ಮೃತ ಶಿವನಗೌಡನು ಆಗಾಗ ಸಾರಾಯಿ ಕುಡಿಯುತ್ತಿದ್ದನು. ಶಿವನಗೌಡ ತೀರಿಕೊಂಡ ನಂತರ ಅವನು ಬೈಕ ಮೇಲಿಂದ ಬಿದ್ದು ತೀರಿಕೊಂಡಿರುತ್ತಾನೆ ಎಂದು ಊರಿನಲ್ಲಿ ಮಾತನಾಡಿಕೊಳ್ಳುತಿದ್ದರು ಎಂದರೆ ಸರಿ. 1ನೇ ಆರೋಪಿಯನ್ನು ನಾನು ಯಾವತ್ತೂ ನೋಡಿರುವುದಿಲ್ಲ.

6. ಪೋಲಿಸರು ನನಗೆ ಠಾಣೆಗೆ ಬರಲು ಹೇಳಿದಾಗ ನಾನು ಹೊಲದಲ್ಲಿ ಇದ್ದೆನು. ಠಾಣೆಯಲ್ಲಿ ನನ್ನ ಜೊತೆ ಚಾಸಾ.9 ಹಾಗೂ ಪೋಲಿಸರು ಇದ್ದರು. ಠಾಣೆಯಲ್ಲಿ ಪೋಲಿಸರು ಮೊಬೈಲಗಳು ಇಂಥವರದ್ದೇ ಎಂದು ತೋರಿಸಲು ನನಗೆ ಯಾವುದೇ ದಾಖಲೆಗಳನ್ನು ತೋರಿಸಿರುವುದಿಲ್ಲ. ಮೊಬೈಲಗಳಲ್ಲಿದ್ದ

ಫೋಟೋ ಮತ್ತು ವಿಡಿಯೋಗಳ ಸಾಮರ್ಥ್ಯ ಎಷ್ಟು ಇತ್ತು ಎಂದು ನನಗೆ ಹೇಳಿರುವುದಿಲ್ಲ. ಫೋಟೋಗಳನ್ನು ನಾನು ವೈಯಕ್ತಿಕವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನಗೆ ಎರಡೂ ಮೊಬೈಲಗಳಿಂದ ಫೋಟೋ ಮತ್ತು ವಿಡಿಯೋಗಳನ್ನು ತೋರಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಫೋಟೋಗಳನ್ನು ಯಾರು ತೆಗೆದಿದ್ದರು, ಯಾವ ಸ್ಥಳದಲ್ಲಿ ತೆಗೆದಿದ್ದರು ಎಂದು ನನಗೆ ಮಾಹಿತಿ ಇಲ್ಲ.

7. ನಿಪಿ-25 ಮತ್ತು 26 ಪಂಚನಾಮೆಗಳಲ್ಲಿ ಇದೇ ರೀತಿ ಬರೆಯಬೇಕು ಎಂದು ನಾನು ಹೇಳಿರುವುದಿಲ್ಲ. ನಿಪಿ-25 ಮತ್ತು 26 ಪಂಚನಾಮೆಗಳನ್ನು ನಾವು ಹೋಗುವ ಮೊದಲೇ ತಯಾರಿಸಿದ್ದರು ಎಂದರೆ ಸರಿಯಲ್ಲ. ನನಗೆ ನಿಪಿ-25 ಮತ್ತು 26 ಪಂಚನಾಮೆಗಳಲ್ಲಿ ಬರೆದ ವಿಷಯ ಗೊತ್ತಿಲ್ಲ, ಆದರೂ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-26 ಪಂಚನಾಮೆಯಂತೆ ನನ್ನ ಸಮಕ್ಷಮ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಹೇಳಿಕೊಟ್ಟಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.